ಯೋಜನೆಯಲ್ಲಿ ಅಂದಾಜು ಮೊತ್ತದ ಶೇಕಡ 30 ಭಾಗದಲ್ಲಿ ಈ ನಾಲೆಗಳ ಅಭಿವೃದ್ಧಿ ಕಾರ್ಯವನ್ನು ಸಹಾ ಕೈಗೊಳ್ಳಲಾಗುವುದು.

ತುರುವೇಕೆರೆಯಿಂದ ಮಲ್ಲೇನಹಳ್ಳಿಗೆ ಬಸ್ ಸಂಪರ್ಕ

1918(2155) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ತುರುವೇಕೆರೆಯಿಂದ ಮಲ್ಲೇನಹಳ್ಳಿ ಗ್ರಾಮಕ್ಕೆ (ಮಾಯಸಂದ್ರ ಹೋಬಳಿ) ಬಸ್ ಬಿಡಲಾಗಿದೆಯೇ; ಯಾವಾಗಿನಿಂದ ಬಿಡಲಾಯಿತು; ವೇಳೆ ಏನು;

ಆ. ಹಾಗಿದ್ದಲ್ಲಿ, ಈಗ ಹೋಗುತ್ತಿರುವ ವೇಳೆಗೆ ಜನರು ಸ್ಪಂದಿಸುತ್ತಿರುವರೆ;

ಇ. ಯಾವ ವೇಳೆಗೆ ಬೇಕೆಂದು ಜನರು ಅಭಿಪ್ರಾಯ ಕೊಟ್ಟಿದ್ದಾರೆ;

ಈ. ಜನರಿಗೆ ಅನುಕೂಲವಾಗುವ ಸಮಯಕ್ಕೆ ಬಸ್ ಓಡಿಸಲು ಇರುವ ತೊಂದರೆಗಳೇನು;

ಉ. ಜನರ ಅಪೇಕ್ಷೆಗೆ ತಕ್ಕಂತೆ ಬಸ್ ವೇಳೆಯನ್ನು ಬದಲಾಯಿಸಿ ತಕ್ಷಣ ಓಡಿಸಲಾಗುವುದೇ?

ಶ್ರೀ ರಮಾನಾಥ ರೈ (ಸಾರಿಗೆ ಸಚಿವರು)

ಅ. ತುರುವೇಕೆರೆಯಿಂದ ಮಲ್ಲೇನಹಳ್ಳಿಗೆ ದಿನಾಂಕ 27.7.2002 ರಿಂದ ಜಾರಿಗೆ ಬರುವಂತೆ ಈ ಕೆಳಕಂಡ ಸಮಯಗಳಲ್ಲಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಿದೆ.

1205	1620	ತುರುವೇಕೆರೆ	1000	1415
1105	1520	ಮಲ್ಲೇನಹಳ್ಳಿ	1100	1515

ಆ. ಇಲ್ಲ.

ಇ. ತುರುವೇಕೆರೆಯಿಂದ ಬೆಳಿಗ್ಗೆ 0900 ಹಾಗೂ 1630 ಗಂಟೆಗಳಿಗೆ ನಿರ್ಗಮಿಸುವಂತೆ ಸಾರಿಗೆ ಬೇಕೆಂದು ಜನರು ಅಭಿಪ್ರಾಯ ಕೊಟ್ಟಿರುತ್ತಾರೆ.

ಈ. ಜನರ ಅಭಿಪ್ರಾಯಕ್ಕೆ ಸ್ಪಂದಿಸಲು ಪರಿಶೀಲಿಸಲಾಗುವುದು.

ಉ. ಪರಿಶೀಲಿಸಲಾಗುವುದು.

ತುರುವೇಕೆರೆ ತಾಲ್ಲೂಕ ಮಾಯಸಂದ್ರ out-post ನ್ನು ಸ್ಟೇಷನ್ನಾಗಿ ಮಾರ್ಪಾಟು ಮಾಡುವುದು.

1919(2156) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ತುರುವೇಕೆರೆ ತಾಲ್ಲೂಕು ಮಾಯಸಂದ್ರ ಹೋಬಳಿ ಕೇಂದ್ರವಾಗಿದ್ದು ಇಲ್ಲಿ ಒಂದು ಸಣ್ಣ out-post ಕೊಡಲಾಗಿದೆಯೆ;

ಆ. ಇತ್ತೀಚೆಗೆ ಮಾಯಸಂದ್ರ ಊರಿನೊಳಗೆ N.H ರಸ್ತೆ ಹಾದು ಹೋಗಿದ್ದು ಭಾರಿ ಸಂಚಾರದಿಂದ ಪೋಲಿಸ್ ವ್ಯವಸ್ಥೆ ಸಾಕಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ. ಹಾಗಿದ್ದಲ್ಲಿ, ತಕ್ಷಣ ಈ out-post ನ್ನು ಬದಲಾಯಿಸಿ ಪೊಲೀಸ್ ಠಾಣೆಯನ್ನಾಗಿ ಮಾಡಲಾಗುವುದೆ;